# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಮೋಹನ್‌ದಾಸ್ ಶೆಟ್ಟಿ ಮತ್ತು ಶ್ರೀ ದೇವಕಿ, ಸದಸ್ಯರು, ಹರೇಕಳ ಗ್ರಾಮ ಪಂಚಾಯತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ದಕ್ಷಿಣ ಕನ್ನಡ ಜಿಲ್ಲೆ ರವರ ಪತ್ರ ಸಂಖ್ಯೆ:ದಕಜಿಪ/ನಿಯೋಜನೆ/ಸಿಆರ್–43/2014–15(ಸಸಾಅ–1) ದಿನಾಂಕ:23–12–2014.
2. ಸರ್ಕಾರದ ಇದೇ ಸಮಸಂಖ್ಯೆಯ ದಿನಾಂಕ: 12–02–2015 ರ ಕಾರಣ ಕೇಳುವ ನೋಟೀಸ್.
3. ಶ್ರೀ ಮೋಹನ್‌ದಾಸ್ ಶೆಟ್ಟಿ ಮತ್ತು ಶ್ರೀ ದೇವಕಿ, ಸದಸ್ಯರು, ಹರೇಕಳ ಗ್ರಾಮ ಪಂಚಾಯತಿ, ಮಂಗಳೂರು ತಾಲ್ಲೂಕು, ಇವರು ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ:24–03–2015.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ದಕ್ಷಿಣ ಕನ್ನಡ ಜಿಲ್ಲೆ ರವರ ಪತ್ರ ಸಂಖ್ಯೆ:ದಕಜಿಪಂ/ಗ್ರಾ.ಪಂ/ಸಿ.ಆರ್/311/2015–16(ಸಿ2) ದಿನಾಂಕ:24–06–2016.
5. ವಿಚಾರಣಾ ತಿಳುವಳಿಕೆ ಪತ್ರ ದಿನಾಂಕ:16–08–2016 ಮತ್ತು 07–09–2016, 28–09–2016.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ದಿನಾಂಕ:23–12–2014 ರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ದಕ್ಷಿಣ ಕನ್ನಡ ಜಿಲ್ಲೆ ರವರ ಪತ್ರದಲ್ಲಿ ಶ್ರೀಮತಿ ದೇವಕಿ, ಸದಸ್ಯರು ಹರೇಕಳ ಗ್ರಾಮ ಪಂಚಾಯತಿ ಮಂಗಳೂರು ತಾಲ್ಲೂಕು ಇವರು ಸದರಿ ಗ್ರಾಮ ಪಂಚಾಯತಿಯ ಸದಸ್ಯರಾಗಿದ್ದು, ವಾಸ್ತವ್ಯಕ್ಕೆ ಯೋಗ್ಯವಾದ ಸ್ವಂತ ಮನೆ ಹೊಂದಿದ್ದರೂ ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು 2013–14ನೇ ಸಾಲಿನಲ್ಲಿ ಇಂದಿರಾ ಆವಾಸ್ ಯೋಜನೆಯಡಿ ಮನೆ ಮಂಜೂರಾತಿ ಪಡೆದುಕೊಂಡಿರುತ್ತಾರೆ. (ಫಲಾನುಭವಿ ಕೋಡ್ ನಂ.83132) ಈ ರೀತಿ ಸರ್ಕಾರದಿಂದ ವಸತಿ ಮಂಜೂರು ಮಾಡಿಸಿಕೊಂಡು ಯಾವುದೇ ದಾಖಲೆಗಳನ್ನು ಗ್ರಾಮ ಪಂಚಾಯತಿಗೆ ನೀಡದೆ ತಾನು ಹೊಂದಿರುವ ಅಂಗಡಿ ಕೋಣೆಯನ್ನು ವಿಸ್ತರಣೆಗಾಗಿ ಪಂಚಾಂಗ ಹಾಕಿ ಅದರ ಜಿ.ಪಿ.ಎಸ್. ಛಾಯಾ ಚಿತ್ರವನ್ನು ಅಳವಡಿಸಿದ ಮೇರೆಗೆ ಸದರಿಯವರ ಖಾತೆಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ರೂ.29,800/– ಪಾವತಿಯಾಗಿರುತ್ತದೆ. ಅಲ್ಲದೆ ಸದರಿಯವರಿಗೆ ಈ ಹಿಂದೆ ಸರ್ಕಾರದ ಆಶ್ರಯ ಯೋಜನೆಯಡಿ ಮನೆ ಮಂಜೂರಾಗಿ ಹಣ ಪಾವತಿಯಾಗಿರುತ್ತದೆ. ಈ ರೀತಿ ಅರ್ಹತೆ ಇಲ್ಲದಿದ್ದರೂ ವಸತಿ ಯೋಜನೆಯಡಿ ಮನೆ ಮಂಜೂರು ಮಾಡಿಸಿಕೊಂಡು ಸರ್ಕಾರದ ಅನುದಾನ ದುರುಪಯೋಗಪಡಿಸಿಕೊಂಡ ಹರೇಕಳ ಗ್ರಾಮ ಪಂಚಾಯತಿ ಸದಸ್ಯೆ ಶ್ರೀಮತಿ ದೇವಕಿ ಮತ್ತು ಈ ಎಲ್ಲಾ ಅವ್ಯವಹಾರಗಳಿಗೆ ಸಹಕರಿಸಿ ಅನರ್ಹ ವ್ಯಕ್ತಿಯನ್ನ ವಸತಿ ಯೋಜನೆಗೆ ಆಯ್ಕೆ ಮಾಡಲು ನೆರವಾಗಿರುವುದು ಮತ್ತು ಈ ಹಿಂದೆ ಸದರಿಯವರಿಗೆ ವಸತಿ ಸೌಲಭ್ಯ ನೀಡಿದ್ದರೂ 2ನೇ ಬಾರಿ ವಸತಿ ಯೋಜನೆಯನ್ನು ಮಂಜೂರು ಮಾಡಿ ಗ್ರಾಮ ಪಂಚಾಯತಿ ಅಧ್ಯಕ್ಷರು ಕೂಡಾ ದುರ್ನಡತೆ ಎಸಗಿರುವುದು ಕಂಡು ಬಂದಿರುವುದರಿಂದ 1993 ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಪ್ರಕರಣ 43(ಎ) ಪ್ರಕಾರ ದುರ್ನಡತೆ ಎಸಗಿದ ಮಂಗಳೂರು ತಾಲ್ಲೂಕು ಹರೇಕಳ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀ ಮೋಹನ್‌ದಾಸ್ ಶೆಟ್ಟಿ ಮತ್ತು ಸದಸ್ಯೆಯಾದ ಶ್ರೀಮತಿ ದೇವಕಿ ರವರ ಸದಸ್ಯತ್ವವನ್ನು ರದ್ದುಪಡಿಸುವ ಬಗ್ಗೆ ಕ್ರಮ ವಹಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಶ್ರೀ ಮೋಹನ್‌ದಾಸ್ ಶೆಟ್ಟಿ ಮತ್ತು ಶ್ರೀ ದೇವಕಿ, ಸದಸ್ಯರು, ಹರೇಕಳ ಗ್ರಾಮ ಪಂಚಾಯತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ದಿನಾಂಕ:12–02–2015 ರಂದು ಕಾರಣ ಕೇಳುವ ನೋಟೀಸ್ ಜಾರಿಗೊಳಿಸಲಾಗಿದ್ದು, ಸದರಿ ಕಾರಣ ಕೇಳುವ ನೋಟೀಸಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಶ್ರೀಮತಿ ದೇವಕಿ ರವರು ಲಿಖಿತ ಹೇಳಿಕೆ ನೀಡಿದ್ದು, ಲಿಖಿತ ಹೇಳಿಕೆಗೆ ಸಹಿ ಹಾಕಿರುವುದಿಲ್ಲ. ಸದರಿ ಲಿಖಿತ ಹೇಳಿಕೆಯಲ್ಲಿ ತಾನು ಈ ಮೊದಲು ಪಂಚಾಯತಿಯ ಯಾವ ಸೌಲಭ್ಯವನ್ನು ಪಡೆದಿರುವುದಿಲ್ಲ. ತನ್ನ ಮನೆಯು ತುಂಬಾ ಚಿಕ್ಕದ್ದಾಗಿದ್ದು, ನೆಲವು ಮಣ್ಣಿನಿಂದ ಕೂಡಿರುತ್ತದೆ. ಇದಕ್ಕೆ ಬೇಕಾಗಿ ಸರ್ಕಾರದ ಯೋಜನೆಯನ್ನು ಪಡೆದುಕೊಂಡಿರುತ್ತೇನೆ. ತನ್ನ ಮೇಲಿನ ಆರೋಪವು ರಾಜಕೀಯ ಪ್ರೇರಿತವಾಗಿರುತ್ತದೆ. ಈ ಯೋಜನೆಯನ್ನು ಪಡೆದುಕೊಂಡ ಹೆಚ್ಚಿನವರು ತನಗಿಂತ ಉತ್ತಮ ಸ್ಥಿತಿಯಲ್ಲಿ ಇರುವವರು ಆಗಿರುತ್ತಾರೆ. ಇದನ್ನು ನೋಡಿದರೆ ತಾನೇನು ತಪ್ಪು ಮಾಡಿಲ್ಲ ಹಾಗೂ ಈ ಯೋಜನೆಗೆ ಅರ್ಹಳು ಎಂದು ಭಾವಿಸಿ ತನಗೆ ನೀಡಿದ ಯೋಜನೆಯ ಸೌಲಭ್ಯವನ್ನು ರದ್ದು ಮಾಡದೆ ಪುನಃ ನೀಡಬೇಕಾಗಿ ತಿಳಿಸಿರುತ್ತಾರೆ.

ಶ್ರೀ ಮೋಹನ್‌ದಾಸ್ ಶೆಟ್ಟಿ ರವರು ಲಿಖಿತ ಹೇಳಿಕೆ ನೀಡಿದ್ದು, ಸದರಿ ಲಿಖಿತ ಹೇಳಿಕೆಯಲ್ಲಿ ತಾನು ಯಾವ ಅವ್ಯವಹಾರವನ್ನು ಪಂಚಾಯತಿಯಲ್ಲಿ ಮಾಡಿಲ್ಲ ಶ್ರೀ ದೇವಕಿ ರವರಿಗೆ ಎಲ್ಲಾ ಸದಸ್ಯರುಗಳ ಒಪ್ಪಿಗೆಯ ಮೇರೆಗೆ ಇಂದಿರಾ ಆವಾಸ್ ಯೋಜನೆಯಡಿ ಮನೆ ಮಂಜೂರಾತಿ ಮಾಡಲು ಒಪ್ಪಿಗೆಯನ್ನು ನೀಡಿರುತ್ತೇನೆ. ಶ್ರೀಮತಿ ದೇವಕಿ ರವರ ಮನೆ ಚಿಕ್ಕದಾಗಿದ್ದು, ಮತ್ತೇ ಅವರು ಈ ಯೋಜನೆಗೆ ಅರ್ಹರು ಎಂದು ತನ್ನ ಅಭಿಪ್ರಾಯವಾಗಿರುತ್ತದೆ. ಶ್ರೀಮತಿ ದೇವಕಿಯವರ ಮೇಲೆ ಮಾಡಿದ ಆರೋಪವು ರಾಜಕೀಯ ಪ್ರೇರಿತವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ದಕ್ಷಿಣ ಕನ್ನಡ ಜಿಲ್ಲೆ ರವರು ಶ್ರೀ ಮೋಹನ್‌ದಾಸ್ ಶೆಟ್ಟಿ ಮತ್ತು ಶ್ರೀ ದೇವಕಿ, ಇವರು ಪ್ರಸ್ತುತ ಹರೇಕಳ ಗ್ರಾಮ ಪಂಚಾಯತಿ ಸದಸ್ಯರಾಗಿರುತ್ತಾರೆಂದು ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿ ಶ್ರೀ ಮೋಹನ್‌ದಾಸ್ ಶೆಟ್ಟಿ ಮತ್ತು ಶ್ರೀ ದೇವಕಿ, ಸದಸ್ಯರು, ಹರೇಕಳ ಗ್ರಾಮ ಪಂಚಾಯತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರು ವಿಚಾರಣೆಗೆ ಹಾಜರಾಗಲು ತಿಳುವಳಿಕೆ ಪತ್ರ ನೀಡಲಾಗಿದ್ದು, ಸದರಿಯವರು ದಿನಾಂಕ:24-09-2016 ಮತ್ತು 28-10-2016 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ಇವರ ನ್ಯಾಯಾಲಯದಲ್ಲಿ ನಡೆದ ಮೌಖಿಕ ವಿಚಾರಣೆಗೆ ಹಾಜರಾಗಿರುತ್ತಾರೆ. ಸದರಿ ವಿಚಾರಣೆಯಲ್ಲಿ ಶ್ರೀಮತಿ ದೇವಕಿ ಇವರಿಗೆ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಮನೆ ಮಂಜೂರಾತಿ ಮಾಡಿದ ಸಂದರ್ಭದಲ್ಲಿ ಶ್ರೀ ಮೋಹನ ದಾಸ್ ಶೆಟ್ಟಿ ರವರು ಹರೇಕಳ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿದ್ದು, ಆ ಸಂದರ್ಭದಲ್ಲಿ ಶ್ರೀಮತಿ ದೇವಕಿ ರವರ ಅರ್ಜಿ ಬಗ್ಗೆ ಗ್ರಾಮ ಸಭೆಯ ಎಲ್ಲಾ ಸದಸ್ಯರ ಹಾಜರಾತಿಯಲ್ಲಿ ದಿನಾಂಕ: 07-02-2014 ರಂದ ನಿರ್ಣಯ ಮಂಡಿಸಿದ್ದು, ಆ ಪ್ರಕಾರ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ.

ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹರೇಕಳ ಗ್ರಾಮ ಪಂಚಾಯತಿ, ಮಂಗಳೂರು ತಾಲ್ಲೂಕು ದಕ್ಷಿಣ ಕನ್ನಡ ಜಿಲ್ಲೆ ರವರು 2013-14ನೇ ಸಾಲಿನ ಇಂದಿರಾ ಆವಾಸ್ ಯೋಜನೆಯಡಿ ಶ್ರೀಮತಿ ದೇವಕಿ ರವರಿಗೆ ಮನೆ ಮಂಜೂರಾಗಿದ್ದು, ರೂ.29,800/- ಪಾವತಿಯಾಗಿರುತ್ತದೆ. ಸದರಿ ಅವಧಿಯಲ್ಲಿ ಶ್ರೀಮತಿ ದೇವಕಿ ರವರು ಹರೇಕಳ ಗ್ರಾಮ ಪಂಚಾಯತಿ ಸದಸ್ಯರಾಗಿದ್ದು, ಶ್ರೀ ಮೋಹನ್ ದಾಸ್ ಶೆಟ್ಟಿ ರವರ ಅಧ್ಯಕ್ಷರಾಗಿದ್ದರು. ಶ್ರೀಮತಿ ದೇವಕಿ ರವರಿಗೆ ಹಳೆಯದಾದ ಮನೆ ಇರುವುದಾಗಿ ತಿಳಿಸಿರುತ್ತಾರೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ನ್ಯಾಯಾಲಯದಲ್ಲಿ ಪರಿಶೀಲಿಸಲಾಗಿದ್ದು, ಶ್ರೀಮತಿ ದೇವಕಿ, ಸದಸ್ಯರು ಹರೇಕಳ ಗ್ರಾಮ ಪಂಚಾಯತಿ ಮಂಗಳೂರು ತಾಲ್ಲೂಕು ಇವರು ಸದರಿ ಗ್ರಾಮ ಪಂಚಾಯತಿಯ ಸದಸ್ಯರಾಗಿದ್ದು, ವಾಸ್ತವ್ಯಕ್ಕೆ ಯೋಗ್ಯವಾದ ಸ್ವಂತ ಮನೆ ಹೊಂದಿದ್ದರೂ ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು 2013-14ನೇ ಸಾಲಿನಲ್ಲಿ ಇಂದಿರಾ ಆವಾಸ್ ಯೋಜನೆಯಡಿ ಮನೆ ಮಂಜೂರಾತಿ ಪಡೆದುಕೊಂಡಿರುತ್ತಾರೆ. ಸದರಿಯವರ ಖಾತೆಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ರೂ.29,800/- ಪಾವತಿಯಾಗಿರುತ್ತದೆ. ಅಲ್ಲದೆ ಸದರಿಯವರಿಗೆ ಈ ಹಿಂದೆ ಸರ್ಕಾರದ ಆಶ್ರಯ ಯೋಜನೆಯಡಿ ಮನೆ ಮಂಜೂರಾಗಿ ಹಣ ಪಾವತಿಯಾಗಿರುತ್ತದೆ. ಈ ರೀತಿ ಅರ್ಹತೆ ಇಲ್ಲದಿದ್ದರೂ ವಸತಿ ಯೋಜನೆಯಡಿ ಮನೆ ಮಂಜೂರು ಮಾಡಿಸಿಕೊಂಡು ಸರ್ಕಾರದ ಅನುದಾನ ದುರುಪಯೋಗಪಡಿಸಿಕೊಂಡ ಹರೇಕಳ ಗ್ರಾಮ ಪಂಚಾಯತಿ ಸದಸ್ಯೆ ಶ್ರೀಮತಿ ದೇವಕಿ ಮತ್ತು ಈ ಎಲ್ಲಾ ಅವ್ಯವಹಾರಗಳಿಗೆ ಸಹಕರಿಸಿ ಅನರ್ಹ ವ್ಯಕ್ತಿಯನ್ನ ವಸತಿ ಯೋಜನೆಗೆ ಆಯ್ಕೆ ಮಾಡಲು ನೆರವಾಗಿರುವುದು ಮತ್ತು ಈ ಹಿಂದೆ ಸದರಿಯವರಿಗೆ ವಸತಿ ಸೌಲಭ್ಯ ನೀಡಿದ್ದರೂ 2ನೇ ಬಾರಿ ವಸತಿ ಯೋಜನೆಯನ್ನು ಮಂಜೂರು ಮಾಡಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀ ಮೋಹನ್ ದಾಸ್ ಶೆಟ್ಟಿ ರವರು ಕೂಡಾ ದುರ್ನಡತೆ ಎಸಗಿರುವುದು ಕಂಡು ಬಂದಿರುತ್ತದೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದಾಗ, ಶ್ರೀಮತಿ ದೇವಕಿ, ಸದಸ್ಯರು, ಹರೇಕಳ ಗ್ರಾಮ ಪಂಚಾಯತಿ ಮಂಗಳೂರು ತಾಲ್ಲೂಕು ಇವರು ಸದರಿ ಗ್ರಾಮ ಪಂಚಾಯತಿಯ ಸದಸ್ಯರಾಗಿದ್ದು, ವಾಸ್ತವ್ಯಕ್ಕೆ ಯೋಗ್ಯವಾದ ಸ್ವಂತ ಮನೆ ಹೊಂದಿದ್ದರೂ ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು 2013-14ನೇ ಸಾಲಿನಲ್ಲಿ ಇಂದಿರಾ ಆವಾಸ್ ಯೋಜನೆಯಡಿ ಮನೆ ಮಂಜೂರು ಮಾಡಿಸಿಕೊಂಡು ಸರ್ಕಾರದ ಅನುದಾನ ದುರುಪಯೋಗ-ಪಡಿಸಿಕೊಂಡಿರುವುದು ಮತ್ತು ಈ ಎಲ್ಲಾ ಅವ್ಯವಹಾರಗಳಿಗೆ ಸಹಕರಿಸಿ ಅನರ್ಹ ವ್ಯಕ್ತಿಯನ್ನು ವಸತಿ ಯೋಜನೆಗೆ ಆಯ್ಕೆ ಮಾಡಲು ನೆರವಾಗಿರುವ ಮತ್ತು ಈ ಹಿಂದೆ ಸದರಿಯವರಿಗೆ ವಸತಿ ಸೌಲಭ್ಯ ನೀಡಿದ್ದರೂ 2ನೇ ಬಾರಿ ವಸತಿ ಯೋಜನೆಯನ್ನು ಮಂಜೂರು ಮಾಡಿ ಶ್ರೀ ಮೋಹನ್ ದಾಸ್ ಶೆಟ್ಟಿ ರವರು ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಕೂಡಾ ದುರ್ನಡತೆ ಎಸಗಿರುವುದು ಕಂಡು ಬಂದಿರುವುದರಿಂದ ಸದರಿಯವರುಗಳನ್ನು ಕರ್ನಾಟಕ ಕರ್ನಾಟಕ ಗ್ರಾಮ ಸ್ವರಾಜ್ ಮತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರಂತೆ ಹರೇಕಳ ಗ್ರಾಮ ಪಂಚಾಯತಿ ಸದಸ್ಯತ್ವದಿಂದ ತೆಗೆದುಹಾಕಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/25/ಗ್ರಾಪಂಅ/2015**
**ಬೆಂಗಳೂರು, ದಿನಾಂಕ: 26-12-2016.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಮೋಹನ್‌ದಾಸ್ ಶೆಟ್ಟಿ ಮತ್ತು ಶ್ರೀ ದೇವಕಿ, ಸದಸ್ಯರು, ಹರೇಕಳ ಗ್ರಾಮ ಪಂಚಾಯತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಹರೇಕಳ ಗ್ರಾಮ ಪಂಚಾಯತಿಯ ಸದಸ್ಯತ್ವ ಸ್ಥಾನದಿಂದ ತೆಗೆದುಹಾಕಿ ಆದೇಶಿಸಿದೆ.

**(ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)**
**ಗ್ರಾಅಪ ಇಲಾಖೆ ರವರಿಂದ ಅನುಮೋದಿತ)**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಟಿ.ವಿ. ಅರುಣ್ ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಗೆ:**

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ದಕ್ಷಿಣ ಕನ್ನಡ ಜಿಲ್ಲೆ,
2) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
3) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹರೇಕಳ ಗ್ರಾಮ ಪಂಚಾಯತಿ, ಮಂಗಳೂರು ತಾಲ್ಲೂಕು ದಕ್ಷಿಣ ಕನ್ನಡ ಜಿಲ್ಲೆ
4) ಶ್ರೀ ಮೋಹನ್‌ದಾಸ್ ಶೆಟ್ಟಿ, ಸದಸ್ಯರು, ಹರೇಕಳ ಗ್ರಾಮ ಪಂಚಾಯತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
5) ಶ್ರೀ ದೇವಕಿ, ಸದಸ್ಯರು, ಹರೇಕಳ ಗ್ರಾಮ ಪಂಚಾಯತಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.
7) ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.